ಕರ್ನಾಟಕ ವಿಧಾನ ಪರಿಷತ್ತು

ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ	:	1518+1519
ವಿಧಾನ ಪರಿಷತ್ತಿನ ಸದಸ್ಯರ ಹೆಸರು	:	ಸುನೀಲ್ ವಲ್ಯಾಪುರ್ (ವಿಧಾನಸಭೆಯಿಂದ ಚುನಾಯಿತರಾದವರು)
ಉತ್ತರಿಸುವ ಸಚಿವರು	:	ತೋಟಗಾರಿಕೆ ಹಾಗೂ ಯೋಜನೆ, ಕಾರ್ಯಕ್ರಮ ಸಂಯೋಜನೆ ಮತ್ತು ಸಾಂಖ್ಯಿಕ ಸಚಿವರು
ಉತ್ತರಿಸಬೇಕಾದ ದಿನಾಂಕ	:	24-09-2021

ಕ್ರ. ಸಂ.	ಪ್ರಶ್ನೆ	ಉತ್ತರ
ಅ	ತೋಟಗಾರಿಕೆ ಇಲಾಖೆಯಿಂದ ಯಾವ ಯಾವ ಬೆಳೆಗಳಿಗೆ ಹನಿ ನೀರಾವರಿ ಅಳವಡಿಕೆಗೆ ಸಬ್ಸಿಡಿ ನೀಡಲಾಗುತ್ತದೆ;	ತೋಟಗಾರಿಕೆ ಇಲಾಖೆಯಿಂದ, ಎಲ್ಲಾ ತೋಟಗಾರಿಕೆ ಬೆಳೆಗಳಿಗೆ ಅಂದರೆ ಹಣ್ಣಿನ ಬೆಳೆಗಳು, ತರಕಾರಿ ಬೆಳೆಗಳು, ಹೂವಿನ ಬೆಳೆಗಳು, ತೋಟದ ಬೆಳೆಗಳು, ಸಾಂಬಾರು ಬೆಳೆಗಳು, ಸುಗಂಧದ್ರವ್ಯ ಹಾಗೂ ಔಷಧೀಯ ಬೆಳೆಗಳಿಗೆ ಹನಿ ನೀರಾವರಿ ಅಳವಡಿಕೆಗೆ ಸಬ್ಸಿಡಿ ನೀಡಲಾಗುತ್ತದೆ. ಕಾಫಿ, ಟೀ ಹಾಗೂ ರಬ್ಬರ್ ಬೆಳೆಗಳನ್ನು ಹೊರತುಪಡಿಸಿಲಾಗಿದೆ.
ಆ	ಸಬ್ಸಿಡಿ ನೀಡಲು ಅನುಸರಿಸುವ ಮಾನದಂಡಗಳೇನು;	**ಸಬ್ಸಿಡಿ ನೀಡಲು ಅನುಸರಿಸುವ ಮಾನದಂಡಗಳು:** 1) ಫಲಾನುಭವಿಗಳು ರೈತರಾಗಿದ್ದು ಜಮೀನು ಅವರ ಹೆಸರಿನಲ್ಲಿರಬೇಕು. ಜಂಟಿ ಖಾತೆಯಾಗಿದ್ದಲ್ಲಿ ಇತರೆ ಖಾತೆದಾರರ ಒಪ್ಪಿಗೆ ಪತ್ರ ಪಡೆದಿರಬೇಕು. 2) ಮಹಿಳೆಯರ ಹೆಸರಿನಲ್ಲಿ ಖಾತೆ ಹೊಂದಿದ್ದಲ್ಲಿ, ಮಹಿಳಾ ಖಾತೆದಾರರೇ ಅರ್ಜಿ ಸಲ್ಲಿಸಬೇಕು. 3) ಫಲಾನುಭವಿಗಳು ತೋಟಗಾರಿಕೆ ಬೆಳೆಗಳನ್ನು ಬೆಳೆಯುವ ರೈತರಾಗಿರಬೇಕು ಅಥವಾ ತೋಟಗಾರಿಕೆ ಬೆಳೆ ಬೆಳೆಯುವ ಆಸಕ್ತಿ ಹೊಂದಿರಬೇಕು ಹಾಗೂ ಸೂಕ್ಷ್ಮ ನೀರಾವರಿ ಅಳವಡಿಸಿದ ನಂತರ ತೋಟಗಾರಿಕೆ ಬೆಳೆಗಳನ್ನೇ ಬೆಳೆಯಬೇಕು. 4) ಫಲಾನುಭವಿಗಳು ನೀರಾವರಿ ಮೂಲವನ್ನು ಹಾಗೂ ಸೂಕ್ಷ್ಮ ನೀರಾವರಿಗೆ ಯೋಗ್ಯವಿರುವಂತಹ ನೀರನ್ನು ಹೊಂದಿರಬೇಕು. ಜೊತೆಗೆ ಸೂಕ್ಷ್ಮ ನೀರಾವರಿ ಘಟಕಗಳು ಕಾರ್ಯನಿರ್ವಹಿಸಲು ಅವಶ್ಯವಿರುವ ವಿದ್ಯುಚ್ಛಕ್ತಿ ಅಥವಾ ಇತರೆ ಶಕ್ತಿಮೂಲಗಳನ್ನು ಹೊಂದಿರಬೇಕು. ತನ್ನ ಸ್ವಂತ ನೀರಾವರಿ ಮೂಲ ಇಲ್ಲದಿದ್ದಲ್ಲಿ ಬೇರೆ ರೈತರಿಂದ ಈ ಸಂಬಂಧ ಒಪ್ಪಿಗೆ ಪತ್ರ ಪಡೆದು ಸಲ್ಲಿಸಬೇಕು. 5) ಸಣ್ಣ ರೈತರಿಗೆ ಗರಿಷ್ಠ 2.00 ಹೆಕ್ಟೇರ್‌ವರೆಗೆ ಶೇ.90ರಷ್ಟು ಸಹಾಯಧನ ನೀಡಲು ಅವಕಾಶವಿರುವುದರಿಂದ ಕಂದಾಯ ಇಲಾಖೆಯಿಂದ ದೃಡೀಕರಣ ಪಡೆದು ಅರ್ಜಿ ಸಲ್ಲಿಸುವ ಸಮಯದಲ್ಲಿ ಕಡ್ಡಾಯವಾಗಿ ಸಲ್ಲಿಸಬೇಕು. 6) ಪರಿಶಿಷ್ಟ ಜಾತಿ ಹಾಗೂ ಪರಿಶಿಷ್ಟ ಪಂಗಡ ರೈತರಿಗೆ ಗರಿಷ್ಠ 2.00 ಹೆಕ್ಟೇರ್‌ವರೆಗೆ ಶೇ.90ರಷ್ಟು ಸಹಾಯಧನ ನೀಡಲು ಅವಕಾಶವಿರುವುದರಿಂದ ಸದರಿ ಪಂಗಡಗಳಿಗೆ

<table>
<tr><td></td><td></td><td>ಸೇರಿರುವ ಬಗ್ಗೆ RD ಸಂಖ್ಯೆ ಇರುವಂತಹ ಜಾತಿ ಪ್ರಮಾಣ ಪತ್ರವನ್ನು ಅರ್ಜಿ ಸಲ್ಲಿಸುವ ಸಮಯದಲ್ಲಿ ಕಡ್ಡಾಯವಾಗಿ ಸಲ್ಲಿಸಬೇಕು.
7) ಸಹಾಯಧನ ಪಡೆಯಲು ರೈತರು ತಮ್ಮ ಇಚ್ಛೆಯನುಸಾರ ಇಲಾಖಾ ಅನುಮೋದಿತ ಕಂಪನಿಗಳಿಂದ ಮಾತ್ರವೇ ದರಪಟ್ಟಿ/ಬಿಲ್ಲುಗಳನ್ನು ಪಡೆದು ಸೂಕ್ಷ್ಮ ನೀರಾವರಿ ಘಟಕಗಳನ್ನು ಅಳವಡಿಸಿಕೊಳ್ಳಬೇಕು.
8) ಅನುಮೋದಿತ ಕಂಪನಿಗಳಿಂದ ಸೂಕ್ಷ್ಮ ನೀರಾವರಿ ಪದ್ಧತಿಯನ್ನು ರೈತರು ತಾಕುಗಳಲ್ಲಿ ಅಳವಡಿಸಿಕೊಂಡ ನಂತರವೇ ಸಹಾ ಯಧನ ಪಡೆಯಲು ಅರ್ಹರಿರುತ್ತಾರೆ.</td></tr>
<tr><td>ಇ</td><td>ಕಳೆದ ಮೂರು ವರ್ಷಗಳಿಂದ ಕಲಬುರಗಿ ಜಿಲ್ಲೆಯಲ್ಲಿ ಎಷ್ಟು ರೈತರು ಸಬ್ಸಿಡಿಗಾಗಿ ಅರ್ಜಿ ಸಲ್ಲಿಸಿದ್ದಾರೆ; ಮತ್ತು ಎಷ್ಟು ಜನರಿಗೆ ಸಬ್ಸಿಡಿ ನೀಡಲಾಗಿದೆ; (ಸಂಪೂರ್ಣ ಮಾಹಿತಿ ಒದಗಿಸುವುದು)</td><td>ಕಳೆದ ಮೂರು ವರ್ಷಗಳಿಂದ ಕಲಬುರಗಿ ಜಿಲ್ಲೆಯಲ್ಲಿ ಒಟ್ಟು 5100 ರೈತರು ಸಬ್ಸಿಡಿಗಾಗಿ ಅರ್ಜಿ ಸಲ್ಲಿಸಿದ್ದಾರೆ; ಒಟ್ಟು 4876 ಜನರಿಗೆ ಸಬ್ಸಿಡಿ ನೀಡಲಾಗಿದೆ. ವಿವರ ಕೆಳಕಂಡಂತಿದೆ.
<table>
<tr><th>ಕ್ರ. ಸಂ</th><th>ವರ್ಷ</th><th>ಸಬ್ಸಿಡಿಗಾಗಿ ಸಲ್ಲಿಸಿರುವ ಅರ್ಜಿಗಳ ಸಂಖ್ಯೆ</th><th>ಸಬ್ಸಿಡಿ ನೀಡಿರುವ ಫಲಾನುಭವಿಗಳ ಸಂಖ್ಯೆ</th></tr>
<tr><td>1</td><td>2018-19</td><td>1850</td><td>1775</td></tr>
<tr><td>2</td><td>2019-20</td><td>1780</td><td>1700</td></tr>
<tr><td>3</td><td>2020-21</td><td>1470</td><td>1401</td></tr>
<tr><td colspan="2">ಒಟ್ಟು</td><td>5100</td><td>4876</td></tr>
</table></td></tr>
<tr><td>ಈ</td><td>ಕಲಬುರಗಿ ಜಿಲ್ಲೆಯಲ್ಲಿ ಬರುವ ನರ್ಸರಿಗಳ ಸಂಖ್ಯೆ ಎಷ್ಟು; ಹಾಗೂ ಯಾವ ಯಾವ ತಳಿಯ ಸಸಿಗಳನ್ನು ತಯಾರು ಮಾಡಲಾಗಿದೆ; (ಸಸಿಯ ತಳಿಯ ವಿವರ ನೀಡುವುದು)</td><td>ಕಲಬುರಗಿ ಜಿಲ್ಲೆಯಲ್ಲಿ ಬರುವ ನರ್ಸರಿಗಳು ಒಟ್ಟು 16.
ಈ ಕೆಳಕಂಡಂತೆ ವಿವಿಧ ತಳಿಯ ಸಸಿಗಳನ್ನು ತಯಾರು ಮಾಡಲಾಗಿದೆ.
<table>
<tr><th>ಕ್ರ.ಸಂ.</th><th>ಸಸಿ</th><th>ತಳಿ</th></tr>
<tr><td>1</td><td>ಸೀಬೆ</td><td>ಅಲಹಾಬಾದ್ ಸಫೇದ್</td></tr>
<tr><td>2</td><td>ತೆಂಗು</td><td>ತಿಪಟೂರು ಟಾಲ್</td></tr>
<tr><td>3</td><td>ಕರಿಬೇವು</td><td>ಸುಹಾಸಿನಿ</td></tr>
<tr><td>4</td><td>ನುಗ್ಗೆ</td><td>ಭಾಗ್ಯ</td></tr>
<tr><td>5</td><td>ನಿಂಬೆ</td><td>ಕಾಗ್ಜಿ</td></tr>
<tr><td>6</td><td>ಡಾಗ್‌ರಿಡ್ಜ್</td><td>ಸ್ಥಳೀಯ</td></tr>
</table></td></tr>
<tr><td>ಉ</td><td>ಈ ತಳಿಗಳಿಗೆ ವೆಚ್ಚ ಮಾಡಿರುವ ಮೊತ್ತ ಎಷ್ಟು? (ಪ್ರತ್ಯೇಕ ನರ್ಸರಿವಾರು ತಳಿಯ ಮತ್ತು ಖರ್ಚಿನ ವಿವರ ನೀಡುವುದು)</td><td>ಈ ತಳಿಗಳಿಗೆ ಒಟ್ಟು ರೂ.9.74 ಲಕ್ಷಗಳನ್ನು ವೆಚ್ಚ ಮಾಡಲಾಗಿದೆ.
ನರ್ಸರಿವಾರು ತಳಿಯ ಮತ್ತು ಖರ್ಚಿನ ವಿವರ ಈ ಕೆಳಕಂಡಂತಿವೆ.
<table>
<tr><th>ಕ್ರ. ಸಂ</th><th>ನರ್ಸರಿಯ ಹೆಸರು</th><th>ಬೆಳೆಗಳ ಹೆಸರು</th><th>ತಳಿಯ ಹೆಸರು</th><th>ತಳಿಗಳಿಗೆ ಭರಿಸಲಾಗಿರುವ ಖರ್ಚು (ರೂ. ಲಕ್ಷಗಳಲ್ಲಿ)</th></tr>
<tr><td rowspan="2">1</td><td rowspan="2">ಚಂದ್ರಂಪಳ್ಳಿ</td><td>ಸೀಬೆ</td><td>ಅಲಹಬಾದ್ ಸಫೇದ್</td><td>0.81</td></tr>
<tr><td>ತೆಂಗು</td><td>ತಿಪಟೂರ್ ಟಾಲ್</td><td>0.55</td></tr>
<tr><td>2</td><td>ಮಾಲಗತ್ತಿ</td><td>ಕರಿಬೇವು</td><td>ಸುಹಾಸಿನಿ</td><td>0.13</td></tr>
</table></td></tr>
</table>

				ನುಗ್ಗೆ	ಭಾಗ್ಯ	0.13
		3	ಗೋಳಾ(ಕೆ)	ನಿಂಬೆ	ಕಾಗ್ಜಿ	0.50
				ಕರಿಬೇವು	ಸುಹಾಸಿನಿ	0.50
		4	ಬಡೆಪೂರ	ಕರಿಬೇವು	ಸುಹಾಸಿನಿ	0.63
				ನುಗ್ಗೆ	ಭಾಗ್ಯ	0.63
		5	ಕೆಸರಟಗಿ	ನಿಂಬೆ	ಕಾಗ್ಜಿ	1.25
				ಕರಿಬೇವು	ಸುಹಾಸಿನಿ	0.25
				ನುಗ್ಗೆ	ಭಾಗ್ಯ	0.25
		6	ಗುಡೂರ	ನಿಂಬೆ	ಕಾಗ್ಜಿ	0.13
				ಕರಿಬೇವು	ಸುಹಾಸಿನಿ	0.13
				ನುಗ್ಗೆ	ಭಾಗ್ಯ	0.13
				ತೆಂಗು	ತಿಪಟೂರ್ ಟಾಲ್	1.17
				ಡಾಗ್ ರಿಡ್ಜ್	ಸ್ಥಳಿಯ	1.88
		7	ಹಳ್ಳಿಸಲಗರ	ನುಗ್ಗೆ	ಭಾಗ್ಯ	0.31
		8	ಕಛೇರಿ ಸಸ್ಯಾಗಾರ ಸೇಡಂ	ನಿಂಬೆ	ಕಾಗ್ಜಿ	0.13
				ಕರಿಬೇವು	ಸುಹಾಸಿನಿ	0.13
				ನುಗ್ಗೆ	ಭಾಗ್ಯ	0.13
		ಒಟ್ಟು				9.74

No.HORTI 438 HGM 2021

(ಮುನಿರತ್ನ)
ತೋಟಗಾರಿಕೆ ಮತ್ತು ಯೋಜನೆ, ಕಾರ್ಯಕ್ರಮ
ಸಂಯೋಜನೆ ಮತ್ತು ಸಾಂಖ್ಯಿಕ ಸಚಿವರು.